ಸಿಂಧಗಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ.

475 - ಶ್ರೀ ಬಸನಗೌಡ ರಾ. ಪಾಟೀಲ (ವಿಜಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಿಂಧಗಿ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರ ಈ ನಗರಕ್ಕೆ ಶಾಶ್ವತ ಕುಡಿಯುವ ನೀರಿನ ಪರಿಹಾರಕ್ಕೆ ತೆಗೆದುಕೊಂಡ ಕ್ರಮಗಳೇನು?*

ಆ) *ಸಿಂಧಗಿ ತಾಲ್ಲೂಕಿನಲ್ಲಿ ಬಳಗಾನೂರ ಕೆರೆಯಿಂದ ನಗರಕ್ಕೆ ನೀರು ತರುವ ಯೋಜನೆ ಕುರಿತು ಸರ್ಕಾರದ ನಿಲುವೇನು? ಪೂರ್ಣ ಯೋಜನೆಗೆ ಎಷ್ಟು ಹಣ ಬೇಕಾಗುವುದು. ಈ ವರ್ಷ ಯೋಜನೆಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ. ಶಾಶ್ವತ ಕುಡಿಯುವ ನೀರಿನ ಪರಿಹಾರ ಒದಗಿಸಲು ಇಂಡಿ ಶಾಖಾ ಕಾಲುವೆಯ ನೀರಿನ ಮೂಲದಿಂದ ನೀರು ಸರಬರಾಜು ಮಾಡುವ ಯೋಜನೆಯ 610.00 ಲಕ್ಷ ರೂ. ಮೊತ್ತದ ಅಂದಾಜಿಗೆ ದಿನಾಂಕ 25.11.95ರ ಆದೇಶದಲ್ಲಿ ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ.

ಆ) ಬಳಗಾನೂರು ಕೆರೆ ಅವಲಂಬನಾರ್ಥ ನೀರಿನ ಮೂಲವಲ್ಲ. ಸದರಿ ಕೆರೆಯಿಂದ ನೀರು ತರುವ ಯೋಜನೆ ಸರ್ಕಾರದ ವಿಚಾರದಲ್ಲಿಲ್ಲ.

ಇಂಡಿ ನಗರದ ಒಳಚರಂಡಿ ಯೋಜನೆ

476 - ಶ್ರೀ ಬಸನಗೌಡ ರಾ. ಪಾಟೀಲ (ವಿಜಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಇಂಡಿ ನಗರದಲ್ಲಿ ಒಳ ಚರಂಡಿ ಯೋಜನೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರದ ತೆಗೆದುಕೊಂಡ ಕ್ರಮವೇನು?*

2) *ಒಳ ಚರಂಡಿ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು? 1996-97ನೇ ಸಾಲಿನ ಯೋಜನೆಗೆ ಹಣ ಬಿಡುಗಡೆ ಮಾಡುವುದೇ?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

1) ಬಂದಿದೆ. ಈ ಪಟ್ಟಣಕ್ಕೆ ಸಾಕಷ್ಟು ಕುಡಿಯುವ ನೀರಿನ ಸರಬರಾಜು ಇಲ್ಲದಿರುವುದು ಸದ್ಯಕ್ಕೆ ಈ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

2) ಉದ್ಭವಿಸುವುದಿಲ್ಲ.